**All India Radio: Bangalore**
**National Bulletin In Kannada**
**24.06.2026 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**24.06.2026 1.10 p.m.**

**<><><><>**

ಮುಖ್ಯಾಂಶಗಳು

1. ವಿಶ್ವಸಂಸ್ಥೆಯ ವೇದಿಕೆಯಲ್ಲಿ ಕಾಶ್ಮೀರ ವಿಷಯ ಪ್ರಸ್ತಾಪಿಸಿದ ಪಾಕಿಸ್ತಾನ ವಿರುದ್ಧ ಭಾರತ ತೀವ್ರ ಆಕ್ಷೇಪ
2. ಇಂದು ಪಾಸ್‌ಪೋರ್ಟ್ ಸೇವಾ ದಿನ; ಸುಗಮ ಪಾರದರ್ಶಕ ಸೇವೆಗೆ ಸರ್ಕಾರ ಬದ್ಧ- ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್
3. ಯುವ ಕೊ-ಲ್ಯಾಬ್ ರಾಷ್ಟ್ರೀಯ ನಾವೀನ್ಯತಾ ಸ್ಪರ್ಧೆ; ದೇಶದ ಆರು ನವೋದ್ಯಮಗಳಿಗೆ ಪ್ರಶಸ್ತಿ
4. ಕೇಂದ್ರೀಯ ವಿದ್ಯಾಲಯಗಳ ೩೬ನೇ ರಾಷ್ಟ್ರೀಯ ಯುವ ಸಂಸತ್ ಸ್ಪರ್ಧೆ; ನಾಳೆ ಪ್ರಶಸ್ತಿ ಪ್ರದಾನ ಸಮಾರಂಭ
5. ಭುವನೇಶ್ವರದಲ್ಲಿ ಇಂದಿನಿಂದ ೬೫ನೇ ರಾಷ್ಟ್ರೀಯ ಅಂತರ್‌ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಆರಂಭ

<><><><>

ವಿಶ್ವಸಂಸ್ಥೆಯ ವೇದಿಕೆಯಲ್ಲಿ ಪಾಕಿಸ್ತಾನವು ಕಾಶ್ಮೀರ ವಿಷಯವನ್ನು ಪ್ರಸ್ತಾಪಿಸಿರುವುದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಪಾಕಿಸ್ತಾನ ಈ ವೇದಿಕೆಯನ್ನು ರಾಜಕೀಯಗೊಳಿಸುತ್ತಿದೆ ಎಂದು ಆರೋಪಿಸಿದೆ. ಇದರಜೊತೆ ಭದ್ರತಾ ಮಂಡಳಿಯ ಅನೌಪಚಾರಿಕ ಕಾರ್ಯಕಾರಿ ಗುಂಪಿನ ಸಹ-ಅಧ್ಯಕ್ಷ ಸ್ಥಾನ ಹೊಂದಿರುವ ಪಾಕಿಸ್ತಾನ. ಅದಕ್ಕೆ ತಕ್ಕಂತೆ ತಟಸ್ಥವಾಗಿ ನಡೆದುಕೊಳ್ಳುವ ಬದಲಾಗಿ, ತನ್ನ ಸ್ಥಾನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಭಾರತ ತರಾಟೆಗೆ ತೆಗೆದುಕೊಂಡಿದೆ. ವಿಶ್ವಸಂಸ್ಥೆಯ ಭಾರತದ ಖಾಯಂ ಪ್ರತಿನಿಧಿ ಪಿ.ಹರೀಶ್, ಪಾಕಿಸ್ತಾನದ ಖಾಯಂ ಪ್ರತಿನಿಧಿ ಆಸಿಮ್ ಇಫ್ತಿಕಾರ್ ಅಹ್ಮದ್ ಅವರ ಹೇಳಿಕೆಗಳಿಗೆ ಪ್ರತಿಕ್ರಿಯಿಸುತ್ತಾ ಈ ಆಕ್ಷೇಪ ಎತ್ತಿದ್ದಾರೆ. ಪಾಕಿಸ್ತಾನದ ಹಸ್ತಕ್ಷೇಪಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ ಪಿ.ಹರೀಶ್, ಸಹ-ಅಧ್ಯಕ್ಷ

ರಾಷ್ಟ್ರದ ನಡವಳಿಕೆಯನ್ನು ತೀವ್ರವಾಗಿ ಟೀಕಿಸಿದರಲ್ಲದೆ, ಜಮ್ಮು ಮತ್ತು ಕಾಶ್ಮೀರದ ಕುರಿತಾದ ಭಾರತದ ಸುದೀರ್ಘ ಹಾಗೂ ದೃಢವಾದ ನಿಲುವನ್ನು ಪುನರುಚ್ಚರಿಸಿದರು. ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶವು ಸಂಪೂರ್ಣವಾಗಿ ಭಾರತದ ಆಂತರಿಕ ವಿಷಯವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು. ಇದೇ ವೇಳೆ, ವಿಶ್ವಸಂಸ್ಥೆಯ ಒಟ್ಟಾರೆ ದಕ್ಷತೆಯನ್ನು ಸುಧಾರಿಸುವ ಉದ್ದೇಶವನ್ನು ಹೊಂದಿರುವ 'ಯುಎನ್-೮೦' ಚೌಕಟ್ಟಿನ ಅಡಿಯಲ್ಲಿ ಪ್ರಸ್ತುತ ನಡೆಯುತ್ತಿರುವ ವಿಶ್ವಸಂಸ್ಥೆಯ ನಿಯಮಾವಳಿಗಳ ಮರುಪರಿಶೀಲನಾ ಪ್ರಕ್ರಿಯೆಯ ಕುರಿತೂ ಭಾರತೀಯ ರಾಯಭಾರಿ ಮಾತನಾಡಿದರು.

<><><><>

೧೯೬೭ರ ಜೂನ್ ೨೪ ರಂದು 'ಪಾಸ್‌ಪೋರ್ಟ್ ಕಾಯ್ದೆ' ಜಾರಿಗೆ ಬಂದಿದ್ದರ ಸ್ಮರಣಾರ್ಥ ದೇಶಾದ್ಯಂತ ಇಂದು ೧೪ನೇ 'ಪಾಸ್‌ಪೋರ್ಟ್ ಸೇವಾ ದಿವಸ್'ನ್ನು ಆಚರಿಸಲಾಗುತ್ತಿದೆ. ಈ ವಿಶೇಷ ಸಂದರ್ಭದಲ್ಲಿ ದೇಶ ಹಾಗೂ ವಿದೇಶಗಳಲ್ಲಿರುವ ಎಲ್ಲಾ ಪಾಸ್‌ಪೋರ್ಟ್ ಅಧಿಕಾರಿಗಳಿಗೆ ಶುಭಕೋರಿರುವ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್ ಜೈಶಂಕರ್, 'ಸುರಕ್ಷಿತ ಪಾಸ್‌ಪೋರ್ಟ್, ಸುಗಮ ಸೇವೆ, ಸಶಕ್ತ ನಾಗರಿಕ' ಎಂಬ ದೂರದೃಷ್ಟಿಯೊಂದಿಗೆ ಪಾಸ್‌ಪೋರ್ಟ್ ಸೇವೆಗಳನ್ನು ಮತ್ತಷ್ಟು ವೇಗವಾಗಿ ಮತ್ತು ಪಾರದರ್ಶಕವಾಗಿ ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಪುನರುಚ್ಚರಿಸಿದ್ದಾರೆ. ಪಾಸ್‌ಪೋರ್ಟ್ ಸೇವಾ ಯೋಜನೆ ೨.೦ ಜಾರಿ, ಚಿಪ್ ಆಧಾರಿತ ಇ-ಪಾಸ್‌ಪೋರ್ಟ್‌ಗಳ ಪರಿಚಯ, ಹೊಸ ಪಾಸ್‌ಪೋರ್ಟ್ ಸೇವಾ ಕೇಂದ್ರಗಳು ಮತ್ತು ದಾಖಲೆ ಪ್ರಮಾಣದ ಪಾಸ್‌ಪೋರ್ಟ್ ವಿತರಣೆಯು ನಾಗರಿಕರ ಸುಲಭ ಪ್ರಯಾಣ ಹಾಗೂ ಜಾಗತಿಕ ಅವಕಾಶಗಳ ಮುಕ್ತ ಪ್ರವೇಶಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ತಿಳಿಸಿದ್ದಾರೆ. ಇದೇ ವೇಳೆ ಕೇಂದ್ರ ಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಮಾತನಾಡಿ, ಇಂಡಿಯಾ ಪೋಸ್ಟ್ ನಿರ್ವಹಿಸುತ್ತಿರುವ ಅಂಚೆ ಕಚೇರಿ ಪಾಸ್‌ಪೋರ್ಟ್ ಸೇವಾ ಕೇಂದ್ರಗಳ ಮೂಲಕ ದೇಶದ ಅತ್ಯಂತ ದೂರದ ಗ್ರಾಮೀಣ ಪ್ರದೇಶಗಳಿಗೂ ಇಂದು ಪಾಸ್‌ಪೋರ್ಟ್ ಸೇವೆಗಳು ತಲುಪುತ್ತಿವೆ ಎಂದಿದ್ದಾರೆ. ಇ-ಪಾಸ್‌ಪೋರ್ಟ್ ಮತ್ತು ಪಾಸ್‌ಪೋರ್ಟ್ ಸೇವಾ ಯೋಜನೆ ೨.೦ ನಂತಹ ಉಪಕ್ರಮಗಳು ಭಾರತದ ಆಧುನಿಕ ಹಾಗೂ ಡಿಜಿಟಲ್ ಆಡಳಿತ ವ್ಯವಸ್ಥೆಗೆ ಪ್ರಬಲ ಸಾಕ್ಷಿಯಾಗಿದ್ದು, ನಾಗರಿಕರಿಗೆ

ಸರಳ ಮತ್ತು ಉತ್ತಮ ಗುಣಮಟ್ಟದ ಸೇವೆಗಳನ್ನು ಒದಗಿಸುವ ಈ ಅಭಿಯಾನವು ನಿರಂತರವಾಗಿ ಮುಂದುವರಿಯಲಿದೆ ಎಂದು ಭರವಸೆ ನೀಡಿದ್ದಾರೆ.

<><><><>

ದೇಶದ ಯುವ ಉದ್ಯಮಿಗಳ ಆರು ನವೋದ್ಯಮಗಳು ಪ್ರತಿಷ್ಠಿತ 'ಲನೇ ಆವೃತ್ತಿಯ ಯುವ ಕೊ-ಲ್ಯಾಬ್ ರಾಷ್ಟ್ರೀಯ ನಾವೀನ್ಯತಾ ಸ್ಪರ್ಧೆ- ೧೦೧೯' ರಲ್ಲಿ ವಿಜೇತರಾಗಿ ಹೊರಹೊಮ್ಮಿವೆ. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ- ಯುಎನ್‌ಡಿಪಿ ಭಾರತ ಮತ್ತು ಸಿಟಿ ಫೌಂಡೇಶನ್ ಜಂಟಿಯಾಗಿ, ನೀತಿ ಆಯೋಗದ ಅಟಲ್ ಇನ್ನೋವೇಶನ್ ಮಿಷನ್ ಸಹಭಾಗಿತ್ವದಲ್ಲಿ ಈ ಉಪಕ್ರಮವನ್ನು ಮುನ್ನಡೆಸುತ್ತಿದ್ದು, ಟಿ-ಹಬ್ ಫೌಂಡೇಶನ್ ಇದನ್ನು ಅನುಷ್ಠಾನಗೊಳಿಸುತ್ತಿದೆ. ಯುವ ನೇತೃತ್ವದ ನಾವೀನ್ಯತೆಗಳನ್ನು ಉತ್ತೇಜಿಸಲು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ವೇಗಗೊಳಿಸಲು ಇದು ಪ್ರಮುಖ ವೇದಿಕೆಯಾಗಿ ಮೂಡಿಬಂದಿದೆ. ಈ ವರ್ಷದ ಸ್ಪರ್ಧೆಗೆ ದೇಶದ ೧೮ ರಾಜ್ಯಗಳ ನವೋದ್ಯಮಗಳಿಂದ ೩೫೦ಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದವು ಎಂದು ನೀತಿ ಆಯೋಗ ತಿಳಿಸಿದೆ. ಕಠಿಣ ಆಯ್ಕೆ ಪ್ರಕ್ರಿಯೆಯ ನಂತರ, ೫೦ ಉನ್ನತ ಸಾಮರ್ಥ್ಯದ ನವೋದ್ಯಮಗಳನ್ನು ಮೂರು ತಿಂಗಳ ವರ್ಚುವಲ್ ಸಾಮರ್ಥ್ಯ ವರ್ಧನೆ ಕಾರ್ಯಕ್ರಮವಾದ 'ನ್ಯಾಷನಲ್ ಸ್ಪ್ರಿಂಗ್‌ಬೋರ್ಡ್ ಪ್ರೋಗ್ರಾಂ'ಗೆ ಆಯ್ಕೆ ಮಾಡಲಾಗಿತ್ತು. ಅಂತಿಮ ಮೌಲ್ಯಮಾಪನದ ಬಳಿಕ, ಅತ್ಯುತ್ತಮ ಹಾಗೂ ಪ್ರಭಾವಶಾಲಿ ಪರಿಹಾರಗಳನ್ನು ಒದಗಿಸಿದ ಆರು ನವೋದ್ಯಮಗಳನ್ನು ವಿಜೇತರನ್ನಾಗಿ ಆಯ್ಕೆ ಮಾಡಲಾಗಿದ್ದು, ವಿಜೇತ ನವೋದ್ಯಮಗಳಿಗೆ ತಲಾ ಮೂರುವರೆ ಲಕ್ಷ ರೂಪಾಯಿ ಹಾಗೂ ರನ್ನರ್ಸ್-ಅಪ್ ತಂಡಗಳಿಗೆ ತಲಾ ೧ ಲಕ್ಷದ ೧೦ ಸಾವಿರ ರೂಪಾಯಿಗಳ ಆರಂಭಿಕ ಪ್ರೋತ್ಸಾಹಧನ ಪ್ರಕಟಿಸಲಾಗಿದೆ.

<><><><>

ಕೇಂದ್ರೀಯ ವಿದ್ಯಾಲಯಗಳಿಗೆ ೧೦೧೫-೧೯ನೇ ಸಾಲಿನ ೩೯ನೇ ರಾಷ್ಟ್ರೀಯ ಯುವ ಸಂಸತ್ ಸ್ಪರ್ಧೆಯ ಬಹುಮಾನ ವಿತರಣಾ ಕಾರ್ಯಕ್ರಮ ನಾಳೆ ನವದೆಹಲಿಯಲ್ಲಿ ನಡೆಯಲಿದೆ. ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ವಿಜೇತ ವಿದ್ಯಾರ್ಥಿಗಳು ಮತ್ತು ವಿದ್ಯಾಲಯಗಳಿಗೆ ಬಹುಮಾನ ವಿತರಿಸಲಿದ್ದಾರೆ. ಸಂಸದೀಯ ವ್ಯವಹಾರಗಳ ಸಚಿವಾಲಯವು ಕಳೆದ ೩೮ ವರ್ಷಗಳಿಂದ ಕೇಂದ್ರೀಯ ವಿದ್ಯಾಲಯಗಳಲ್ಲಿ ಯುವ ಸಂಸತ್ ಸ್ಪರ್ಧೆಗಳನ್ನು ಆಯೋಜಿಸುತ್ತಿದೆ. ರಾಷ್ಟ್ರೀಯ

ಯುವ ಸಂಸತ್ ಸ್ಪರ್ಧೆಯ ಯೋಜನೆಯಡಿಯಲ್ಲಿ, ಸರಣಿಯ ೩೬ನೇ ಸ್ಪರ್ಧೆಯನ್ನು ೨೦೨೫-೨೬ರಲ್ಲಿ ಭಾರತದಾದ್ಯಂತ ಕೇಂದ್ರೀಯ ವಿದ್ಯಾಲಯ ಸಂಘಟನೆಯ ೨೫ ಪ್ರದೇಶಗಳ ೨೦೦ ವಿದ್ಯಾಲಯಗಳಲ್ಲಿ ಆಯೋಜಿಸಲಾಗಿದೆ. ಯುವ ಸಂಸತ್ ಯೋಜನೆಯು ಯುವ ಪೀಳಿಗೆಯಲ್ಲಿ ಸ್ವಯಂ ಶಿಸ್ತಿನ ಮನೋಭಾವ, ವೈವಿಧ್ಯಮಯ ಅಭಿಪ್ರಾಯಗಳ ಸಹಿಷ್ಣುತೆ, ದೃಷ್ಟಿಕೋನಗಳ ನ್ಯಾಯಯುತ ಅಭಿವ್ಯಕ್ತಿ ಮತ್ತು ಪ್ರಜಾಪ್ರಭುತ್ವ ಜೀವನ ವಿಧಾನದ ಇತರ ಸದ್ಗುಣಗಳನ್ನು ಬೆಳೆಸುವ ಗುರಿಯನ್ನು ಹೊಂದಿದೆ.

<><><>

ಮುಂದ್ರಾ ಬಂದರಿನ ಮೂಲಕ ೩ ಸಾವಿರ ಕೆಜಿ ಮಾದಕ ದ್ರವ್ಯ ಆಮದು ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ- ಇಡಿ ಇಂದು ದೆಹಲಿಯ ಐದು ಸ್ಥಳಗಳಲ್ಲಿ ವ್ಯಾಪಕ ಶೋಧ ಕಾರ್ಯಾಚರಣೆ ನಡೆಸುತ್ತಿದೆ. ಆರೋಪಿಗಳಾದ ಹರ್‌ಪ್ರೀತ್ ಸಿಂಗ್ ತಲ್ವಾರ್, ಶಂಶುದ್ದೀನ್ ಮತ್ತು ಅವರ ಸಹಚರರಿಗೆ ಸೇರಿದ ಕಚೇರಿ ಹಾಗೂ ನಿವಾಸಗಳ ಮೇಲೆ ಈ ದಾಳಿ ನಡೆದಿದೆ ಎಂದು ಇಡಿ ಅಧಿಕಾರಿಗಳು ತಿಳಿಸಿದ್ದಾರೆ. ಮಾದಕ ದ್ರವ್ಯ ಮಾರಾಟದಿಂದ ಬಂದ ಹಣವನ್ನು ದೆಹಲಿಯ ಹಲವು ನೈಟ್‌ಕ್ಲಬ್‌ಗಳಲ್ಲಿ ಹೂಡಿಕೆ ಮಾಡಲಾಗಿತ್ತು ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

<><><>

ಕಳೆದ ಹಲವು ಗಂಟೆಗಳಿಂದ ಸುರಿಯುತ್ತಿರುವ ಭಾರೀ ಮುಂಗಾರು ಮಳೆಯಿಂದ ಮುಂಬೈ ಹಾಗೂ ಅದರ ಉಪನಗರ ಪ್ರದೇಶಗಳು ತೀವ್ರವಾಗಿ ಜಲಾವೃತಗೊಂಡಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ನಗರದ ಹಲವು ಭಾಗಗಳಲ್ಲಿ ೩೦೦ ಮಿಲಿಮೀಟರ್‌ಗಿಂತ ಅಧಿಕ ಮಳೆಯಾಗಿದ್ದು, ನೀರು ನಿಲ್ಲುವ ಸಮಸ್ಯೆಂ ನಿವಾರಿಸಲು ಹಾಗೂ ಅಗತ್ಯ ಸೇವೆಗಳ ಸುಗಮ ಕಾರ್ಯನಿರ್ವಹಣೆಗೆ ಬೃಹನ್‌ಮುಂಬೈ ಮಹಾನಗರ ಪಾಲಿಕೆ- ಬಿಎಂಸಿ ವ್ಯಾಪಕ ಕ್ರಮ ಕೈಗೊಂಡಿದೆ. ಕಳೆದ ೨೪ ಗಂಟೆಯ ಅಂಕಿ-ಅಂಶಗಳ ಪ್ರಕಾರ, ಕೊಲಾಬಾದಲ್ಲಿ ೨೪೮ ಮಿಲಿಮೀಟರ್ ಹಾಗೂ ಸಾಂತಾಕ್ರೂಜ್‌ನಲ್ಲಿ ೨೨೫ ಮಿಲಿಮೀಟರ್ ಮಳೆಯಾಗಿದೆ. ಅತೀ ಹೆಚ್ಚು ಮಳೆ ಬಿದ್ದ ಪ್ರದೇಶಗಳಲ್ಲಿ ಮಾಲ್ವಾನಿಯಲ್ಲಿ ಸುಮಾರು ೩೪೦ ಮಿಲಿಮೀಟರ್ ಮತ್ತು ಪರೇಲ್ ಭಾಗದಲ್ಲಿ ಸುಮಾರು ೩೩೪ ಮಿಲಿಮೀಟರ್ ಮಳೆಯಾಗಿದೆ. ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ಬಿಎಂಸಿ ತನ್ನ ತುರ್ತು ಪ್ರತಿಕ್ರಿಯಾ ವ್ಯವಸ್ಥೆಯನ್ನು ಸಂಪೂರ್ಣ ಪ್ರಮಾಣದಲ್ಲಿ

ಸಕ್ರಿಯಗೊಳಿಸಿದ್ದು, ೭ ಸಾವಿರಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ವಿವಿಧ ಪ್ರದೇಶಗಳಲ್ಲಿ ನಿಯೋಜಿಸಿದೆ.

<><><><>

ಇರಾನ್ ಜೊತೆಗಿನ ನಾಲ್ಕು ತಿಂಗಳ ಸಂಘರ್ಷ ಮುಕ್ತಾಯದ ಬೆನ್ನಲ್ಲೇ ಏರ್ಪಟ್ಟಿರುವ ನೂತನ ಒಪ್ಪಂದದ ಹಿನ್ನೆಲೆಯಲ್ಲಿ, ಪ್ರಮುಖ ಅರಬ್ ಮಿತ್ರರಾಷ್ಟ್ರಗಳಿಗೆ ಭರವಸೆ ನೀಡಲು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೋ ಮೂರು ದಿನಗಳ ಗಲ್ಫ್ ಪ್ರವಾಸ ಆರಂಭಿಸಿದ್ದಾರೆ. ನಿನ್ನೆ ತಡರಾತ್ರಿ ಅಬುಧಾಬಿಗೆ ತಲುಪಿರುವ ಅವರು ಯುಎಇ, ಕುವೈತ್, ಬಹ್ರೇನ್ ಮತ್ತು ಗಲ್ಫ್ ಸಹಕಾರ ಮಂಡಳಿ-ಜಿಸಿಸಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲಿದ್ದಾರೆ. ಈ ಭೇಟಿಯ ವೇಳೆ ಅವರು ಅಮೆರಿಕ-ಇರಾನ್ ನಡುವಿನ ಮಧ್ಯಂತರ ಶಾಂತಿ ಒಪ್ಪಂದದ ಕುರಿತು ಪ್ರಾದೇಶಿಕ ಪಾಲುದಾರರಿಗೆ ಮಾಹಿತಿ ನೀಡಲಿದ್ದು, ಈ ಮಾತುಕತೆಗಳಲ್ಲಿ ಗಲ್ಫ್ ರಾಷ್ಟ್ರಗಳ ಅಭಿಪ್ರಾಯಗಳನ್ನೂ ಪರಿಗಣಿಸಲಾಗುವುದು ಎಂದು ತಿಳಿಸಿದ್ದಾರೆ.

<><><><>

ಇರಾನ್‌ನಲ್ಲಿ ಭದ್ರತಾ ಪರಿಸ್ಥಿತಿ ಸುಧಾರಿಸುತ್ತಿರುವ ಹಿನ್ನೆಲೆಯಲ್ಲಿ, ಅಲ್ಲಿನ ಭಾರತೀಯ ಪ್ರಜೆಗಳಿಗಾಗಿ ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಪರಿಷ್ಕೃತ ಸಲಹಾ ಮಾರ್ಗಸೂಚಿಯನ್ನು ಹೊರಡಿಸಿದೆ.

<><><><>

ಭುವನೇಶ್ವರದಲ್ಲಿನ ಕಳಿಂಗಾ ಕ್ರೀಡಾಂಗಣದಲ್ಲಿ ಇಂದಿನಿಂದ ೬೫ನೇ ರಾಷ್ಟ್ರೀಯ ಅಂತರ್‌ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಆರಂಭವಾಗಲಿದೆ. ಇದು ಏಷ್ಯನ್ ಗೇಮ್ಸ್‌ಗೆ ಅರ್ಹತಾ ಕೂಟವಾಗಿರಲಿದ್ದು, ಇದೇ ೧೮ರವರೆಗೆ ನಡೆಯಲಿದೆ. ೧೭ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸುಮಾರು ೬೩೦ ಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆಯಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>